SSLC Social Science question paper with key answer 1

# ಮಾದರಿ ಉತ್ತರಗಳು

**1. ಮೊದಲನೇ ಆಂಗ್ಲೋ–ಮರಾಠ ಯುದ್ಧ ಈ ಒಪ್ಪಂದದೊಂದಿಗೆ ಕೊನೆಗೊಂಡಿತು,**

ಎ) ಸಾಲ್‌ಬಾಯ್ ಒಪ್ಪಂದ

**2. ಹಿಟ್ಲರನು ಗಲಭೆಗಳನ್ನುಂಟು ಮಾಡಿ ಜನರಲ್ಲಿ ಭೀತಿ ಹುಟ್ಟಿಸಲು ರಚಿಸಿದ್ದ ಕ್ರೌರ್ಯಪಡೆ**

ಸಿ) ಬೂದು ಅಂಗಿದಳ

**3. ಡಾ. ಡಿ. ಎಂ. ನಂಜುಂಡಪ್ಪ ಸಮಿತಿ ಸ್ಥಾಪನೆಯ ಉದ್ದೇಶ**

ಬಿ) ಪ್ರಾದೇಶಿಕವಾದವನ್ನು ತಡೆಯುವುದು

**4. ಮಕ್ಕಳ ದುಡಿಮೆಯನ್ನು ನಿಷೇಧಿಸಿದ ಸಂವಿಧಾನದ ವಿಧಿ**

ಬಿ) 24ನೇ ವಿಧಿ

**5. ಕರ್ನಾಟಕದಲ್ಲಿ ಅಪ್ಪಿಕೋ ಚಳವಳಿ ನೇತೃತ್ವ ವಹಿಸಿದ್ದವರು,**

ಡಿ) ಸಲ್ಯಾನಿ ಗ್ರಾಮದ ರೈತರು

**6. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಉತ್ತರ ಪ್ರದೇಶದಲ್ಲಿ ಬೀಳುವ ಪರಿಸರಣ ಮಳೆಯನ್ನು ಹೀಗೆ ಕರೆಯುವರು,**

ಬಿ) ಆಂಡೀಸ್

**7. ಭಾರತದ ಹಸಿರು ಕ್ರಾಂತಿಯ ಪಿತಾಮಹ**

ಸಿ) ಎಂ. ಎಸ್. ಸ್ವಾಮಿನಾಥನ್

**8. ಗ್ರಾಹಕ ರಕ್ಷಣಾ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲು ಕಟ್ಟಬೇಕಾದ ಶುಲ್ಕ ಅಥವಾ ನೊಂದಾವಣಿ ಶುಲ್ಕ**

ಸಿ) ಯಾವುದೇ ಹಣ ಪಾವತಿಸುವಂತಿಲ್ಲ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 8x1= 8**

**9. ಹೊಲೊಕಾಸ್ಟ್ ಎಂದರೇನು?**

- ಹಿಟ್ಲರ್ ನಡೆಸಿದ ಸಾಮೂಹಿಕ ಕಗ್ಗೊಲೆಗಳನ್ನು ಹೊಲೊಕಾಸ್ಟ್ ಎನ್ನುವರು.

**10. ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಇಂಗ್ಲೆಂಡಿಗೆ ಏಕೆ ಮರಳಿದನು?**

- ಅವನ ಯುದ್ಧಪ್ರಿಯ ನೀತಿಯಿಂದ ಕಂಪನಿಯ ಸಾಲದ ಹೊರೆ ಹೆಚ್ಚಾಗಿ ವೆಲ್ಲೆಸ್ಲಿ ರಾಜಿನಾಮೆ ನೀಡಿ ಇಂಗ್ಲೆಂಡಿಗೆ ಮರಳಿದನು

**11. ಭಾರತ ನಿಶ್ಯಸ್ತ್ರೀಕರಣವನ್ನು ಉತ್ತೇಜಿಸುತ್ತದೆ. ಏಕೆ?**

- ಭಾರತ ಶಾಂತಿಪ್ರಿಯ ದೇಶ. ಆದ್ದರಿಂದ ಭಾರತ ನಿಶ್ಯಸ್ತ್ರೀಕರಣವನ್ನು ಉತ್ತೇಜಿಸುತ್ತದೆ.

**12. ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ (1994) ಯನ್ನು ಏಕೆ ಜಾರಿಗೆ ತರಲಾಗಿದೆ?**

- ಹೆಣ್ಣು ಭ್ರೂಣಹತ್ಯೆ ತಡೆಯಲು

**13. ಮಾವಿನ ಹೊಯ್ಲು ಎಂದರೇನು?**

- ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕೇರಳದಲ್ಲಿ ಬೀಳುವ ಪರಿಸರಣ ಮಳೆಯನ್ನು ಮಾವಿನ ಹೊಯ್ಲು ಕರೆಯುವರು.

**14. ಇಂದು ಅಭ್ರಕದ ರಫ್ತು ಕಡಿಮೆಯಾಗಿದೆ. ಏಕೆ?**

- ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿರುವುದರಿಂದ ಇಂದು ಅಭ್ರಕದ ರಫ್ತು ಕಡಿಮೆಯಾಗಿದೆ.

**15. ವಿಕೇಂದ್ರೀಕರಣ ಎಂದರೇನು?**

- ಹಳ್ಳಿಯ ಆಡಳಿತ ಹಾಗೂ ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೇ ವಹಿಸಿಕೊಡುವುದನ್ನು ವಿಕೇಂದ್ರೀಕರಣ ಎನ್ನುವರು.

**16. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಬ್ಯಾಂಕ್ ಖಾತೆ ಯಾವುದು?**

- ಚಾಲ್ತಿ ಖಾತೆ

| III. ಈ ಪ್ರತಿಯೊಂದು ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 8 x 2 = 16 |
|---|

**17. ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟ ರಾಜ್ಯಗಳು ಅನುಸರಿಸಬೇಕಾದ ನಿಬಂಧನೆಗಳೇನು?**

- ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿ ಮೂಲಕ ಭಾರತೀಯ ಅರಸರನ್ನು ನಿಯಂತ್ರಿಸಿದನು.
- ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
- ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು.
- ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
- ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.
- ಯಾವುದೇ ರಾಜ್ಯದೊಂದಿಗೆ ಯುದ್ಧ/ಸಂಧಾನ ಮಾಡಿಕೊಳ್ಳಬೇಕಾದರೆ ಬ್ರಿಟಿಷರ ಸಮ್ಮತಿ ಬೇಕು.
- ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು. (ಯಾವುದಾದರೂ 4)

**18. ಭಾರತ ಒಕ್ಕೂಟಕ್ಕೆ ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನ ವಿಶಿಷ್ಟವಾಗಿದೆ. ಹೇಗೆ?.**

- ಜಮ್ಮು ಕಾಶ್ಮೀರಿನ ರಾಜನಾಗಿದ್ದ ಹರಿಸಿಂಗ್‌ನು ಸ್ವತಂತ್ರವಾಗಿ ಉಳಿಯಲು ನಿರ್ಧರಿಸಿದ್ದನು.
- ಪಾಕಿಸ್ತಾನವು ಕಾಶ್ಮೀರ ಕಣಿವೆಯ ಮುಸ್ಲಿಂ ಬುಡಕಟ್ಟು ಜನರನ್ನು ದಾಳಿ ಮಾಡುವಂತೆ ಪ್ರಚೋದಿಸಿತು.
- ಷೇಕ್ ಅಬ್ದುಲ್ಲಾನ ನ್ಯಾಷನಲ್ ಕಾನ್ಫರೆನ್ಸ್ ಪಕ್ಷ ಪ್ರಜಾಪ್ರಭುತ್ವ ಸಂವಿಧಾನ ಹೊಂದಿದ ಭಾರತದೊಂದಿಗೆ ಗುರುತಿಸಿಕೊಳ್ಳುವುದೇ ಉತ್ತಮವೆಂದು ಹೋರಾಟ.
- ರಾಜಾ ಹರಿಸಿಂಗ ಭಾರತದ ಸಹಾಯ ಕೋರಿದನು.
- ಪಾಕಿಸ್ತಾನದ ಉದ್ದೇಶ ವಿಫಲವಾಗಿ ಕಾಶ್ಮೀರ ಕೆಲವು ಷರತ್ತುಗಳೊಂದಿಗೆ ಭಾರತದೊಂದಿಗೆ ವಿಲೀನವಾಯಿತು.

| **19. ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವುವು?** | **ದ್ವಿತೀಯ ಮಹಾಯುದ್ಧ ಬಳಿಕ ಎದುರಾದ ಸಮಸ್ಯೆಗಳಾವುವು?** |
|---|---|
| ♦ ಭಾರತ–ಪಾಕಿಸ್ತಾನಗಳ ಮಧ್ಯೆ ನಡೆದ ಯುದ್ಧಗಳು.<br>♦ ಕಾಶ್ಮೀರ ಸಮಸ್ಯೆ<br>♦ ಭಯೋತ್ಪಾದನೆ<br>♦ ಪಾಕಿಸ್ತಾನ ಭಯೋತ್ಪಾದನೆಯನ್ನು ಪ್ರಚೋದಿಸುವುದು | ♦ ಮಾನವ ಹಕ್ಕುಗಳ ನಿರಾಕರಣೆ<br>♦ ಶಸ್ತ್ರಾಸ್ತ್ರಗಳ ಪೈಪೋಟಿ<br>♦ ಆರ್ಥಿಕ ಅಸಮಾನತೆ<br>♦ ಭಯೋತ್ಪಾದಕತೆ |
| **20. ಅಸಂಘಟಿತ ವಲಯದ ಕೆಲಸಗಾರ ಎದುರಿಸುತ್ತಿರುವ ಸಮಸ್ಯೆಗಳಾವುವು?** | **ಪ್ರಮುಖ ಪರಿಸರ ಚಳುವಳಿಗಳನ್ನು ಪಟ್ಟಿ ಮಾಡಿ.** |
| ♦ ಅಸಂಘಟಿತ ದುಡಿಮೆಗೆ ನಿಗದಿತ ನಿಯಮಗಳಿಲ್ಲ.<br>♦ ಇವರ ದುಡಿಮೆಗೆ ಕಡಿಮೆ ಕೂಲಿ ನೀಡಲಾಗುತ್ತದೆ.<br>♦ ಯಾವುದೇ ಉಚಿತ ವೈದ್ಯಕೀಯ ಸೌಲಭ್ಯಗಳಿಲ್ಲ.<br>♦ ಇವರ ಕೆಲಸಕ್ಕೆ ಭದ್ರತೆ ಇರುವುದಿಲ್ಲ.<br>♦ ನಿಗದಿತ ವೇತನ, ನಿವೃತ್ತಿ ವೇತನ ಇರುವುದಿಲ್ಲ.<br>♦ ಉದ್ಯೋಗಪತಿಗಳಿಂದ ಶೋಷಣೆಗೆ ಒಳಗಾಗುವರು.<br>♦ ಯಾವುದೇ ಭತ್ಯೆಗಳಿರುವುದಿಲ್ಲ. (ಯಾವುದಾದರೂ 4) | ♦ ಚಿಪ್ಕೋ ಚಳವಳಿ<br>♦ ಅಪ್ಪಿಕೋ ಚಳುವಳಿ<br>♦ ನರ್ಮದಾ ಆಂದೋಲನ<br>♦ ಮೌನ ಕಣಿವೆ ಆಂದೋಲನ<br>♦ ಕರ್ನಾಟಕ ಕರಾವಳಿ ತೀರದ ಪರಿಸರ ಚಳವಳಿ<br>♦ ಕೈಗಾ ವಿರೋಧಿ ಚಳವಳಿ<br>(ಯಾವುದಾದರೂ 4) |

**21. ಪಶ್ಚಿಮ ಘಟ್ಟ ಮತ್ತು ಪೂರ್ವ ಘಟ್ಟಗಳನ್ನು ವ್ಯತ್ಯಸಿಸಿ.**

| ಪಶ್ಚಿಮ ಘಟ್ಟಗಳು | ಪೂರ್ವ ಘಟ್ಟಗಳು |
|---|---|
| ♦ ಪಶ್ಚಿಮ ಘಟ್ಟಗಳು ಹೆಚ್ಚು ಎತ್ತರವಾಗಿವೆ. | ♦ ಪೂರ್ವ ಘಟ್ಟಗಳು ಹೆಚ್ಚು ಎತ್ತರವಾಗಿಲ್ಲ |
| ♦ ಪಶ್ಚಿಮ ಘಟ್ಟಗಳು ನಿರಂತರವಾಗಿವೆ. | ♦ ಪೂರ್ವ ಘಟ್ಟಗಳು ನಿರಂತರವಾಗಿಲ್ಲ |
| ♦ ನದಿಗಳು ಉಗಮವಾಗುತ್ತವೆ | ♦ ನದಿ ಕಣಿವೆಗಳಿಂದ ಪ್ರತ್ಯೇಕಿಸಲ್ಪಟ್ಟಿವೆ (ಯಾವುದಾದರೂ 4) |

**22. ಭಾರತದಲ್ಲಿ ಹತ್ತಿ ಬೆಳೆಯಲು ಅವಶ್ಯಕ ಪೂರಕ ಅಂಶಗಳಾವುವು?**

- ಮುಂಗಾರು (ಖಾರೀಫ್) ಬೆಳೆಯಾಗಿ ಬೆಳೆಯುತ್ತಾರೆ.
- 200 – 250 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
- 75 ರಿಂದ 150 ಸೆಂ.ಮೀ ಮಳೆ ಬೇಕು.
- ಕಪ್ಪು ಮಣ್ಣು, ಮೆಕ್ಕಲು ಮಣ್ಣುಗಳಲ್ಲಿ ಬೆಳೆಯಬಲ್ಲವು.
- ತೇವಾಂಶ ಹಿಡಿದಿಟ್ಟುಕೊಳ್ಳುವ ಮಣ್ಣು ಹೆಚ್ಚು ಸೂಕ್ತ. (ಯಾವುದಾದರೂ 4)

**23. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳೇನು?**

- ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು.
- ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು.
- ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು.
- ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದು.
- ಅರ್ಥವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು. (ಯಾವುದಾದರೂ 4)

**24. ಬಳಕೆದಾರರ ಶೋಷಣೆಗೆ ಕಾರಣಗಳು ಯಾವುವು?**

- ಮಧ್ಯವರ್ತಿಗಳ ಹಾವಳಿ.
- ಮಧ್ಯವರ್ತಿಗಳೇ ಬೆಲೆಯನ್ನು ನಿರ್ಧರಿಸುವುದು.
- ಗ್ರಾಹಕ ಮತ್ತು ಪೂರೈಕೆದಾರರ ನಡುವಿನ ಅಂತರ ಹೆಚ್ಚಾಗಿರುವುದು.
- ಗ್ರಾಹಕ–ಪೂರೈಕೆದಾರರ ನಡುವೆ ನೇರ ವ್ಯವಹಾರವಿಲ್ಲ.

## IV. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 3 ರಿಂದ 6 ವಾಕ್ಯಗಳಲ್ಲಿ ಉತ್ತರಿಸಿ. 9 x 3 = 27

**25. ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳೇನು?**

| ಪ್ಲಾಸಿ ಕದನಕ್ಕೆ ಕಾರಣಗಳು | ಪ್ಲಾಸಿ ಕದನದ ಪರಿಣಾಮಗಳು |
|---|---|
| • ಬ್ರಿಟಿಷ್ ನೌಕರರಿಂದ ದಸ್ತಕ್‌ಗಳ ದುರುಪಯೋಗ<br>• ಅನುಮತಿ ಇಲ್ಲದೆ ಕೋಟೆಯ ದುರಸ್ಥಿ<br>• ಕಪ್ಪುಕೋಣೆ ದುರಂತ | • ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ವ್ಯಾಪಾರಿ ವರ್ಗದ ಲೋಭಿತನವನ್ನು ಪ್ರದರ್ಶಿಸಿತು.<br>• ಮೀರ್ ಜಾಫರ್ ಬಂಗಾಳದ ನವಾಬನಾದನು.<br>• ಕಂಪನಿ ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕು ಪಡೆಯಿತು.<br>• ಮೀರ್ ಜಾಫರ ಕಂಪನಿಗೆ 17 ಕೋಟಿ 70ಲಕ್ಷ ರೂ. ನೀಡಿದನು. |

**26. ಭಾರತೀಯ ತಾತ್ವಿಕತೆ ಮತ್ತು ಸ್ವಾತಂತ್ರ್ಯ ಚಳುವಳಿಗೆ ಅನಿಬೆಸೆಂಟ್‌ರವರು ಅಪಾರ ಕೊಡುಗೆಗಳನ್ನು ನೀಡಿದ್ದಾರೆ. ದೃಢೀಕರಿಸಿ.**

- ಥಿಯಾಸಾಫಿಕಲ್ ಸೊಸೈಟಿ ಕಾರ್ಯಗಳಿಗೆ ನವಚೈತನ್ಯ.
- ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ ಬಿತ್ತಿದರು.
- ಸಮಾಜದಲ್ಲಿ ಸಮಾನತೆ, ಸಹೋದರತೆಯನ್ನು ವೃದ್ಧಿಸಲು, ಸಾಮರಸ್ಯ ಸಾಧಿಸಲು ಪ್ರಯತ್ನಿಸಿದರು.
- ಸ್ವಾತಂತ್ರ್ಯ ಚಳುವಳಿಯನ್ನು ಬೆಂಬಲಿಸಿದರು.
- 'ನ್ಯೂ ಇಂಡಿಯಾ' ಪತ್ರಿಕೆಯನ್ನು ಪ್ರಾರಂಭಿಸಿದರು.
- 1916ರಲ್ಲಿ ಹೋಂರೂಲ್ ಚಳುವಳಿ ಪ್ರಾರಂಭಿಸಿದರು.
- 1917ರ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷೆಯಾಗಿದ್ದರು.

| 27. ಚಿಕ್ಕದೇವರಾಜ ಒಡೆಯರ್ ಅವರ ಸಾಧನೆಗಳನ್ನು ವಿವರಿಸಿ. | ಬ್ರಿಟಿಷ್ ಶಿಕ್ಷಣದಿಂದ ಭಾರತೀಯರ ಮೇಲೆ ಆದ ಪರಿಣಾಮಗಳು |
|---|---|
| • ಇವರು ಸಮರ್ಥಯೋಧರು, ಆಡಳಿತಗಾರರಾಗಿದ್ದರು.<br>• ಶಿವಾಜಿಯ ಸೇನೆಯನ್ನು ಮಧುರೆ, ಇಕ್ಕೇರಿ ಮತ್ತು ಬಿಜಾಪುರಗಳಲ್ಲಿ ಹಿಮ್ಮೆಟಿಸಿದರು.<br>• ಮಾಗಡಿ, ಮಧುಗಿರಿ, ಕೊರಟಗೆರೆ ವಶಪಡಿಸಿಕೊಂಡರು.<br>• ಬೆಂಗಳೂರನ್ನು ಮೊಗಲರಿಂದ ಕೊಂಡುಕೊಂಡರು.<br>• ಇವರಿಗೆ ಕರ್ನಾಟಕ ಕವಿಚಕ್ರವರ್ತಿ, ಅಪ್ರತಿಮ ವೀರ, ನವಕೋಟಿ ನಾರಾಯಣ ಎಂಬ ಬಿರುದುಗಳಿದ್ದವು<br>• ಆಡಳಿತದಲ್ಲಿ ನೆರವಾಗಲು ಅಠಾರ ಕಛೇರಿ ರಚಿಸಿದರು.<br>• ಕಾವೇರಿ ನದಿಗೆ ಅಣೆಕಟ್ಟು ಕಟ್ಟಿದರು.<br>• ಚಿಕ್ಕದೇವರಾಜ ನಾಲೆ ಮತ್ತು ದೊಡ್ಡ ದೇವರಾಜ ನಾಲೆ ಎಂಬ ಎರಡು ಕಾಲುವೆ ನಿರ್ಮಿಸಿದರು.<br>• ಕವಿಗಳಿಗೆ ಮತ್ತು ಪಂಡಿತರಿಗೆ ಆಶ್ರಯ ನೀಡಿದರು.<br>(ಯಾವುದಾದರೂ 6) | • ರಾಷ್ಟ್ರೀಯ ದೃಷ್ಟಿಕೋನ ಬೆಳೆಸಿಕೊಳ್ಳಲು ಸಾಧ್ಯವಾಯಿತು<br>• ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹ.<br>• ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ಏಕತೆ.<br>• ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆ.<br>• ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯತೊಡಗಿದವು.<br>• ಸಾಮಾಜಿಕ ಧಾರ್ಮಿಕ ಸುಧಾರಣಾ ಚಳುವಳಿ ಆರಂಭ<br>• ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲೂ ಆಯಿತು.<br>• ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು.<br>(ಯಾವುದಾದರೂ 6) |

**28. ಪ್ರಪಂಚದ ಮಾನವರ ಆರೋಗ್ಯ ಸುಧಾರಣೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಪಾತ್ರ ಪ್ರಮುಖವಾದುದು. ದೃಢೀಕರಿಸಿ.**

♦ ಮಾನವರ ಆರೋಗ್ಯ ಸುಧಾರಿಸಲು ಸ್ಥಾಪನೆಯಾಗಿದೆ.
♦ ಸಿಡುಬು ರೋಗ ನಿವಾರಿಸುವಲ್ಲಿ ಯಶಸ್ಸು ಕಂಡಿದೆ.
♦ ಜನಸಂಖ್ಯಾ ಸ್ಪೋಟ ಹೋಗಲಾಡಿಸಲು ಪ್ರಯತ್ನ.
♦ ಹಸಿವು, ಅಪೌಷ್ಟಿಕತೆಯ ಹೋಗಲಾಡಿಸಲು ಪ್ರಯತ್ನ.
♦ ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು ಮುಂತಾದ ರೋಗಗಳನ್ನು ತೊಡೆದು ಹಾಕಲು ಯತ್ನಿಸುತ್ತಿದೆ.
♦ ಏಡ್ಸ್, ಕ್ಯಾನ್ಸರ್‌ನಂತಹ ರೋಗಗಳ ಮುಕ್ತಿಗೆ ಪ್ರಯತ್ನ.

**29. ಭಾರತವು ಅಸ್ಪೃಶ್ಯತೆಯ ನಿವಾರಣೆಗೆ ತೆಗೆದುಕೊಂಡಿರುವ ಕ್ರಮಗಳಾವುವು?**

♦ 17ನೇ ವಿಧಿ ಅಸ್ಪೃಶ್ಯತೆ ಆಚರಣೆಯನ್ನು ನಿಷೇಧಿಸಿದೆ.
♦ ಅಸ್ಪೃಶ್ಯತೆಯ ಆಚರಣೆ ಶಿಕ್ಷಾರ್ಹ ಅಪರಾಧವಾಗಿದೆ.
♦ 1955ರಲ್ಲಿ "ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ" ಜಾರಿಗೆ.
♦ 1976ರಲ್ಲಿ ಇದನ್ನು "ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ" ಎಂದು ಮಾರ್ಪಾಡುಗೊಳಿಸಲಾಯಿತು.
♦ ಸಾರ್ವತ್ರಿಕ ಮತದಾನದ ಹಕ್ಕನ್ನು ನೀಡಿದೆ.
♦ ಸಮಾನತೆಯ ಹಕ್ಕನ್ನು ನೀಡಿದೆ.
♦ ಶಿಕ್ಷಣ & ಉದ್ಯೋಗವಕಾಶಗಳಲ್ಲಿ ಮೀಸಲಾತಿ ನೀಡಿದೆ.
♦ 1989ರ ಶಾಸನವು ರಾಜ್ಯ ಸರ್ಕಾರಗಳಿಗೆ ಅಸ್ಪೃಶ್ಯತೆ ನಿರ್ಮೂಲನೆಯ ವಿಶೇಷ ಜವಾಬ್ದಾರಿ ವಹಿಸಿದೆ. (ಯಾವುದಾದರೂ 6)

| **30. ಪ್ರವಾಹಗಳಿಂದುಂಟಾಗುವ ಪರಿಣಾಮಗಳಾವುವು?** | **ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು** |
|---|---|
| ♦ ಜನರ ಆಸ್ತಿ-ಪಾಸ್ತಿ, ಮನೆ ಹಾನಿಯಾಗುತ್ತವೆ. | ♦ ಕಚ್ಚಾವಸ್ತುಗಳು |
| ♦ ಭೂಮಿ ಮತ್ತು ಬೆಳೆಗಳನ್ನು ಹಾನಿ ಮಾಡುತ್ತವೆ. | ♦ ಮಾರುಕಟ್ಟೆ |
| ♦ ಸಂಪರ್ಕ, ವಿದ್ಯುತ್, ಸಾರಿಗೆ ಸೌಲಭ್ಯಗಳು ಅಸ್ತವ್ಯಸ್ತ. | ♦ ಕಾರ್ಮಿಕರ ಪೂರೈಕೆ |
| ♦ ಫಲವತ್ತಾದ ಮಣ್ಣಿನ ಮೇಲ್ಭಾಗ ಕೊಚ್ಚಿಹೋಗುತ್ತದೆ. | ♦ ಶಕ್ತಿ ಸಂಪನ್ಮೂಲಗಳು |
| ♦ ಅನೇಕ ಗಿಡ ಮರಗಳು ಹಾನಿಗೊಳಗಾಗುತ್ತವೆ. | ♦ ಸಂಚಾರ ಸೌಲಭ್ಯ |
| ♦ ಪ್ರವಾಹಗಳಿಂದ ಹರಡಿದ ನೀರು ಅನೇಕ ರೋಗಗಳ ಉಲ್ಬಣಕ್ಕೆ ಕಾರಣವಾಗುತ್ತದೆ | ♦ ಬಂದರುಗಳ ಸೌಲಭ್ಯ |

**31. ಮಣ್ಣಿನ ಸಂರಕ್ಷಣಾ ಕ್ರಮಗಳನ್ನು ತಿಳಿಸಿ.**

♦ ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.
♦ ಅಡ್ಡ ಬದುಗಳನ್ನು ನಿರ್ಮಿಸುವುದು.
♦ ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ.
♦ ಅರಣ್ಯ ನಾಶವನ್ನು ತಡೆಗಟ್ಟುವುದು
♦ ಅರಣ್ಯಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು.
♦ ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು.
♦ ನೀರಿನ ಯೋಜಿತ ಬಳಕೆ.
♦ ಚೆಕ್ ಡ್ಯಾಮ್‌ಗಳ ನಿರ್ಮಾಣ ಇತ್ಯಾದಿ.

| **32. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಪ್ರಮುಖವಾದುದು. ಸಮರ್ಥಿಸಿ.** | **ಕೇಂದ್ರ ಸರ್ಕಾರವು ತೆರಿಗೆಯೇತರ ಮೂಲಗಳಿಂದಲೂ ಆದಾಯ ಸಂಗ್ರಹಿಸುತ್ತದೆ. ದೃಢೀಕರಿಸಿ.** |
|---|---|
| ♦ ಅಭಿವೃದ್ಧಿಯಲ್ಲಿ ಗ್ರಾಮದ ಜನರು ಪಾಲ್ಗೊಳ್ಳುವಂತೆ ಮಾಡುವದು. | ♦ ಭಾರತೀಯ ರಿಸರ್ವ್ ಬ್ಯಾಂಕು ಗಳಿಸುವ ನಿವ್ವಳ ಲಾಭ. |
| ♦ ಗ್ರಾಮೀಣ ಮೂಲ ಸೌಕರ್ಯಗಳ ಅಭಿವೃದ್ಧಿ. | ♦ ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭ. |
| ♦ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣಕ್ಕೆ ಪ್ರೋತ್ಸಾಹ. | ♦ ಅಂಚೆ & ದೂರವಾಣಿ ಸೇವೆಗಳಿಂದ ಬರುವ ಆದಾಯ. |
| ♦ ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ. | ♦ ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ. |
| ♦ ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿ. | ♦ ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ. |
| ♦ ಬಡತನ ಮತ್ತು ನಿರುದ್ಯೋಗ ಹೋಗಲಾಡಿಸುವುದು. | ♦ ವಿವಿಧ ರೀತಿಯ ಶುಲ್ಕಗಳು, ದಂಡಗಳು. |
| ♦ ವಸತಿಹೀನರಿಗೆ ಮನೆಗಳನ್ನು ನಿರ್ಮಿಸಿಕೊಡುವುದು. | |
| ♦ ಬಡಜನರಿಗೆ ಆಹಾರ ಧಾನ್ಯ ಒದಗಿಸುವುದು. | |
| ♦ ಸಮಾಜ ಕಲ್ಯಾಣ ಸೇವೆಗಳನ್ನು ಒದಗಿಸುವುದು. | |
| ♦ ಗ್ರಾಮೀಣ ಕಲೆ, ಸಂಸ್ಕೃತಿ ಶ್ರೀಮಂತಗೊಳ್ಳುತ್ತದೆ. (ಯಾವುದಾದರೂ 6) | |

**33. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಯ ಪಾತ್ರ ಪ್ರಮುಖವಾದುದು. ಸಮರ್ಥಿಸಿ.**

- ಜನರ ಉಳಿತಾಯಗಳನ್ನು ಬಂಡವಾಳ ರೂಪದಲ್ಲಿ ಸಂಗ್ರಹಿಸುತ್ತಾರೆ.
- ಉದ್ಯೋಗಗಳನ್ನು ಒದಗಿಸುತ್ತಾರೆ.
- ದೇಶದ ಆದಾಯ & ತಲಾವರಮಾನ ಹೆಚ್ಚಿಸುತ್ತಾರೆ.
- ಮಾರುಕಟ್ಟೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.
- ಉತ್ತಮ ವಸ್ತುಗಳನ್ನು ಕಡಿಮೆ ದರದಲ್ಲಿ ಒದಗಿಸುವರು.
- ಜನರ ಜೀವನಮಟ್ಟ ಉತ್ತಮಗೊಳ್ಳಲು ಶ್ರಮಿಸುತ್ತಾರೆ.
- ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.
- ಸಮಾಜದ ಏಳಿಗೆಗೆ ಸಹಾಯ ಮಾಡುತ್ತಾರೆ.
- ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ. (ಯಾವುದಾದರೂ 6)

**ಅಥವಾ** **ಉಳಿತಾಯ ಖಾತೆ ಹಾಗೂ ಚಾಲ್ತಿ ಖಾತೆಯ ವ್ಯತ್ಯಾಸಗಳಾವುವು?**

| ಉಳಿತಾಯ ಖಾತೆ | ಚಾಲ್ತಿ ಖಾತೆ |
|---|---|
| ♦ ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ ಹೊಂದಿರುವ ಜನರು, ವಿಧ್ಯಾರ್ಥಿಗಳು, ಹಿರಿಯ ನಾಗರಿಕರು, ಪಿಂಚಣಿದಾರರು ಖಾತೆ ತೆರೆಯಲು ಅವಕಾಶವಿದೆ.<br>♦ ಚೆಕ್ಕು ಪುಸ್ತಕ ಅಥವಾ ಚೀಟಿಯ ಮೂಲಕ ಹಣ ಹಿಂದಕ್ಕೆ ಪಡೆಯಬಹುದು.<br>♦ ಈ ಖಾತೆಯ ಠೇವಣಿಗಳಿಗೆ ಬಡ್ಡಿಯನ್ನು ಕೊಡುವರು.<br>♦ ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ.<br>♦ ಈ ಖಾತೆಯ ಗರಿಷ್ಠ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ. | ♦ ಈ ಖಾತೆಯನ್ನು ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ.<br>♦ ಠೇವಣಿಗಳ ಮರುಪಾವತಿ ಮತ್ತು ಬೇಡಿಕೆ ಠೇವಣಿಗಳ ಮೂಲಕ ಹಣವನ್ನು ಹಿಂಪಡೆಯಬಹುದು.<br>♦ ತಮ್ಮ ಸೇವೆಗೆ ಸೇವಾ ಶುಲ್ಕ ವಸೂಲು ಮಾಡುತ್ತವೆ.<br>♦ ದಿನಕ್ಕೆ ಎಷ್ಟು ಬಾರಿಯಾದರೂ ಹಣ ತುಂಬಬಹುದು ಮತ್ತು ಎಷ್ಟು ಬಾರಿಯಾದರೂ ಹಿಂಪಡೆಯಬಹುದು. |

**V. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **4 x 4 = 16**

| **34. "ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವು ಕಾರಣಗಳಿಂದ ವಿಫಲವಾಯಿತು."ಸ್ಪಷ್ಟೀಕರಿಸಿ.** | **ಜವಾಹರಲಾಲ್ ನೆಹರು ಅವರು ನವಭಾರತದ ಶಿಲ್ಪಿ. ವಿಶ್ಲೇಷಿಸಿ.** |
|---|---|
| ♦ ಇಡೀ ಭಾರತವನ್ನು ವ್ಯಾಪಿಸಿದ ದಂಗೆಯಾಗಿರಲಿಲ್ಲ.<br>♦ ರಾಜರ ರಾಣಿಯರ ಸ್ವಹಿತಾಸಕ್ತಿಗಾಗಿ ನಡೆದಿತ್ತು.<br>♦ ಇದು ಯೋಜಿತ ದಂಗೆಯಾಗಿರಲಿಲ್ಲ<br>♦ ಭಾರತೀಯ ಸೈನಿಕರಲ್ಲಿ ಒಗ್ಗಟ್ಟಿರಲಿಲ್ಲ.<br>♦ ದಂಗೆಗೆ ಸೂಕ್ತ ಮಾರ್ಗದರ್ಶನವಿರಲಿಲ್ಲ<br>♦ ಸಂಘಟನೆಯ ಕೊರತೆ ಇತ್ತು.<br>♦ ಸೂಕ್ತ ಸೇನಾ ನಾಯಕತ್ವಗಳ ಕೊರತೆ ಇತ್ತು.<br>♦ ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ.<br>♦ ಹಲವು ದೇಶೀಯ ರಾಜರು ಬ್ರಿಟಿಷರಿಗೆ ನಿಷ್ಠೆ ತೋರಿದರು<br>♦ ಸಿಪಾಯಿಗಳು ಮಾಡಿದ ಲೂಟಿ, ದರೋಡೆಗಳಿಂದ ಜನರ ವಿಶ್ವಾಸ ಕಳೆದುಕೊಂಡರು. | ♦ ಭಾರತದ ಪ್ರಥಮ ಪ್ರಧಾನಿಯಾಗಿ ಸೇವೆ ಸಲ್ಲಿಸಿದರು.<br>♦ ಕೈಗಾರೀಕರಣ, ನವಭಾರತದ ಶಿಲ್ಪಿಯಾಗಿಯಾಗಿದ್ದಾರೆ.<br>♦ ಸರ್ದಾರ್ ಪಟೇಲರ ನೆರವಿನಿಂದ ದೇಶಿಯ ಸಂಸ್ಥಾನಗಳ ವಿಲೀನಿಕರಣವನ್ನು ಪೂರ್ಣಗೊಳಿಸಿದರು.<br>♦ ಭಾಷಾವಾರು ಪ್ರಾಂತ್ಯಗಳ ರಚನೆ ಮಾಡಿದರು.<br>♦ ಕೈಗಾರೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು ನಂಬಿದ್ದರು<br>♦ ಭಾರತದಲ್ಲಿ ಕೈಗಾರಿಕೀಕರಣವನ್ನು ಸಾಧಿಸಿದರು.<br>♦ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದರು.<br>♦ ಮಿಶ್ರ ಆರ್ಥಿಕ ನೀತಿಯನ್ನು ಜಾರಿಗೆ ತಂದರು.<br>♦ ಅಲಿಪ್ತ ನೀತಿಯನ್ನು ಪ್ರತಿಪಾದಿಸಿದರು.<br>♦ ಪಂಚಶೀಲ ತತ್ವಗಳ ಮೇಲೆ ವಿದೇಶಾಂಗ ನೀತಿ ರೂಪಿಸಿದರು. |

**35. ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ವಿವರಿಸಿ.**

- ರೌಲತ್ ಕಾಯ್ದೆಯ ವಿರುದ್ಧ ಪಂಜಾಬಿನಲ್ಲಿ ಚಳವಳಿಯು ವ್ಯಾಪಕವಾಗಿ ಹರಡಿತು.
- ಅಲ್ಲಲ್ಲಿ ಇದು ಹಿಂಸಾತ್ಮಕ ಸ್ವರೂಪಕ್ಕೆ ತಿರುಗಿತು.
- ಅಮೃತಸರ ನಗರವನ್ನು ಜನರಲ್ ಡಯರ್ ಎಂಬ ಸೇನಾಧಿಕಾರಿಯ ಉಸ್ತುವಾರಿಗೆ ನೀಡಿತು.
- ಜನರಲ್ ಡಯರ್ ಸಭೆಗಳನ್ನು ನಿಷೇಧಿಸಿದನು.
- ಆದರೆ, ಜಲಿಯನ್‌ವಾಲಾಬಾಗ್‌ನಲ್ಲಿ ಸಭೆ ಸೇರಲು ಹೋರಾಟಗಾರರು ಮೊದಲೇ ನಿರ್ಧರಿಸಿದ್ದರು.
- ಅವರಿಗೆ ನಿಷೇಧದ ಬಗ್ಗೆ ಪೂರ್ಣ ತಿಳಿವಳಿಕೆ ಇರಲಿಲ್ಲ.
- ಸುಮಾರು 20 ಸಾವಿರ ಜನ ರೌಲತ್ ಕಾಯ್ದೆಯ ವಿರುದ್ಧದ ಪ್ರತಿಭಟನಾ ಸಭೆಯಲ್ಲಿ ಸೇರಿದ್ದರು.
- ಸುತ್ತಲೂ ಎತ್ತರವಾದ ಗೋಡೆಗಳಿಂದ, ಕಿರಿದಾದ ಪ್ರವೇಶವಾಗಿದ್ದ ಜಲಿಯನ್ ವಾಲಾಬಾಗ್‌ನಲ್ಲಿ ಸಭೆ ಶಾಂತಿಯಿಂದ ನಡೆಯುತ್ತಿತ್ತು.
- ಜನರಲ್ ಡಯರ್ ಯಾವ ಮುನ್ಸೂಚನೆಯನ್ನು ನೀಡದೆ ಸೇರಿದ್ದ ಜನರ ಮೇಲೆ ಗುಂಡಿನ ಮಳೆಗರೆದನು.

| |
|---|
| ♦ 379 ಪ್ರತಿಭಟನಾಕಾರರು ಪ್ರಾಣ ಕಳೆದುಕೊಂಡರು.<br>♦ ಸಹಸ್ರಾರು ಜನರು ಗಾಯಗೊಂಡರು.<br>♦ ಇದನ್ನು ಜಲಿಯನ್ ವಾಲಾಬಾಗ್ ದುರಂತ ಎನ್ನುವರು. (ಯಾವುದಾದರೂ 8) |
| **36. ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ಉತ್ತಮ ಪಡಿಸಲು ಕೈಗೊಂಡಿರುವ ಕ್ರಮಗಳೇನು?**<br>♦ ಮಹಿಳಾ & ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಾರಂಭ<br>♦ ಮಹಿಳಾ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ.<br>♦ ಬಾಲ್ಯವಿವಾಹ ನಿಷೇಧ ಕಾಯ್ದೆ ರೂಪಿಸಿದೆ.<br>♦ ವರದಕ್ಷಿಣೆ ನಿಷೇಧ ಕಾಯ್ದೆ ರೂಪಿಸಿದೆ.<br>♦ ಕರ್ನಾಟಕದಲ್ಲಿ 'ಸ್ತ್ರೀ ಶಕ್ತಿ' ಕಾರ್ಯಕ್ರಮ ರೂಪಿಸಿದೆ.<br>♦ ಸ್ವ–ಉದ್ಯೋಗಕ್ಕಾಗಿ ಸಾಲಸೌಲಭ್ಯ ಮತ್ತು ಸಬ್ಸಿಡಿ.<br>♦ ಮಹಿಳಾ ಆಯೋಗಗಳನ್ನು ರಚಿಸಲಾಗಿದೆ.<br>♦ ಸ್ಥಳೀಯ ಆಡಳಿತದಲ್ಲಿ ಮೀಸಲಾತಿ ನೀಡಲಾಗಿದೆ.<br>♦ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ನೀಡಲಾಗಿದೆ. |
| **37. ಭಾರತದಲ್ಲಿ ಅರಣ್ಯಗಳ ಸಂರಕ್ಷಣಾ ಕ್ರಮಗಳಾವುವು?**<br>♦ ಕಾಡ್ಗಿಚ್ಚು ಉಂಟು ಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.<br>♦ ಮರಗಳಿಗೆ ತಗಲುವ ರೋಗ ನಿಯಂತ್ರಿಸುವುದು.<br>♦ ಸಸಿಗಳನ್ನು ನೆಡುವುದು, ಬೀಜಗಳನ್ನು ಹರಡುವುದು.<br>♦ ಮರ ಕಡಿಯುವದನ್ನು ನಿಯಂತ್ರಿಸುವುದು.<br>♦ ಅರಣ್ಯಗಳಲ್ಲಿ ಮೇಯಿಸುವಿಕೆ ನಿಯಂತ್ರಿಸುವುದು.<br>♦ ಸಾರ್ವಜನಿಕರು ಮರ ನೆಡಲು ಪ್ರೋತ್ಸಾಹಿಸುವುದು.<br>♦ ಅರಣ್ಯ ರಕ್ಷಣೆಗೆ ಜನರನ್ನು ಪ್ರೇರೇಪಿಸುವುದು.<br>♦ ಸಾಮಾಜಿಕ ಅರಣ್ಯ ಯೋಜನೆ ಜಾರಿಗೆ. |
| **VI. 38. ಭಾರತದ ಅಂದವಾದ ನಕ್ಷೆ ಬರೆದು ಇವುಗಳನ್ನು ಗುರುತಿಸಿ.** **1 + 4 = 5**<br>**ಎ) ಕರ್ಕಾಟಕ ಸಂಕ್ರಾಂತಿ ವೃತ್ತ ಬಿ) ಹಿರಾಕುಡ್ ಸಿ) ಕೈಗಾ ಡಿ) ಕಾಂಡ್ಲಾ** |

